ಕರೆಯುತ್ತಾರೆ?" ಶರ್ಮಿಳಾ ಮತ್ತೆ ಕೇಳಿದಳು.

ಇರ್ನೆ ಈಗ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಳು. ಆದರೆ ಆ ಸಮಯಕ್ಕೆ ಏನಾದರೊಂದು ಉತ್ತರ ಹೇಳಲೇಬೇಕಲ್ಲವೆ?

"ಶರ್ಮಿಳಾ, ಖಂಡಿತ ನನಗದು ಗೊತ್ತಿಲ್ಲ. ಒಂದು ಕೆಲಸ ಮಾಡು, ಯಾವುದಾದರೂ ಅಂಗಡಿಗೆ ನೀನೇ ಹೋಗಿ ಕೇಳಿ ಪ್ರಯತ್ನಿಸು" ಎಂದು ಆ ಸಂಭಾಷಣೆಗೆ ಕೊನೆ ಹೇಳಿದಳು.

ಮರುದಿನ ಇರ್ನೆ, ಶರ್ಮಿಳಾಳ ಪುಸ್ತಕವನ್ನು ವಾಪಸು ಕೊಡುವ ನೆವದಲ್ಲಿ ಆ ಪುಸ್ತಕದ ಬಗೆಗೇ ಹೆಚ್ಚು ಮಾತಾಡುತ್ತ, "ನಿನ್ನೆ ನನ್ನ ಅಪ್ಪ, 'ಏನಮ್ಮ, ಈಗ ಏನು ಓದ್ತಾ ಇದ್ದೀ' ಎಂದು ಕೇಳಿದರು. ನಾನು 'ಪ್ರೈಡ್ ಅಂಡ್ ಪ್ರಿಜುಡೀಸ್' ಓದ್ತಾ ಇದ್ದೇನೆಂದು ಹೇಳಿದೆ. ಅವರು ಆಶ್ಚರ್ಯಪಟ್ಟು, 'ನೋಡೋಣ ಆ ಪುಸ್ತಕ ತೋರಿಸು' ಎಂದರು. ನಾನು ಅವರಿಗೆ ಆ ಪುಸ್ತಕವನ್ನು ತೋರಿಸಿದೆ. ಅವರು ತುಂಬಾ ಖುಷಿಪಟ್ಟು, 'ಓ, ಗುಡ್, ನೀನು ಇಂಥ ಒಳ್ಳೆಯ ಪುಸ್ತಕಗಳನ್ನೇ ಓದಬೇಕು' ಎನ್ನುತ್ತ, 'ನೋಡು ನೀನು ಓದುತ್ತಿರುವುದು ಸಂಗ್ರಹಿತ ಆವೃತ್ತಿ. ಇದು ಓದಲು ತುಂಬಾ ಸುಲಭವಾಗಿರುತ್ತದೆ. ಆದರೆ, ದೊಡ್ಡವಳಾದ ಮೇಲೆ ನೀನು ಮೂಲ ಕಾದಂಬರಿಯನ್ನು ಪೂರ್ತಿಯಾಗಿ ಓದಬೇಕು ಎಂದರು" ಎಂದೆಲ್ಲಾ ವಿವರ ಕೊಡುತ್ತ, ಅವಳು ಬರ್ಗರ್‌ನ ವಿಷಯದ ಪ್ರಸ್ತಾಪ ಬರದ ಹಾಗೆ ನೋಡಿಕೊಂಡಳು.

"ಹೌದು, ನನ್ನ ತಂದೆ ಕೂಡ ಹಾಗೇ ಹೇಳುತ್ತಾರೆ. ನಾವೀಗ ಚಾರ್ಲಸ್ ಡಿಕನ್ಸ್‌ನ 'ಓಲಿವರ್ ಟ್ವಿಸ್ಟ್' ಓದಿದೆವಲ್ಲವೆ? ಇಂಥ ಎಷ್ಟೋ ಒಳ್ಳೆಯ ಪುಸ್ತಕಗಳಿವೆ. ಅಂಥವುಗಳನ್ನು ನನಗಾಗಿ ತಂದುಕೊಡುತ್ತೇನೆಂದು ಅಪ್ಪ ಹೇಳಿದ್ದಾರೆ."

ಶರ್ಮಿಳಾಳ ಮನೆಯಲ್ಲಿ ಅವಳು ಗೋಮಾಂಸದ ಬರ್ಗರ್ ತಿಂದ ವಿಷಯವೇ ಗೊತ್ತಾಗಿಲ್ಲವೆಂದು ತಿಳಿದ ಇರ್ನೆಗೆ ಒಂದು ಕಡೆ ಸಣ್ಣ ಸಮಾಧಾನವಾದರೂ, ಅವಳೊಳಗಿನ ಅಪರಾಧಿ ಪ್ರಜ್ಞೆ ಕಡಿಮೆಯಾಗಲಿಲ್ಲ. 'ಗೊತ್ತಿದ್ದೋ, ಇಲ್ಲ ಗೊತ್ತಿಲ್ಲದೆಯೋ ಶರ್ಮಿಳಾ ಪಾಪವನ್ನಂತೂ ಮಾಡಿದ್ದಾಳಲ್ಲವೆ?... ಹಾಗಿದ್ದರೆ, ಗೊತ್ತಿಲ್ಲದೆಯೇ ಮಾಡಿದ್ದು ಪಾಪವಾಗಬಲ್ಲುದೆ? ಸದ್ಯದ ಮಾತು ಏನೇ ಇರಲಿ, ಮುಂದೆ ಕೆಲವು ದಿನಗಳ ನಂತರ ಸತ್ಯವೇನೆಂಬುದು ಅವಳಿಗೆ ಗೊತ್ತಾದರೆ ಹೇಗೆ?' ಇರ್ನೆಯ ತಲೆಯಲ್ಲಿ ಮತ್ತೆ ತಾಕಲಾಟ ಸುರುವಾಯಿತು.

ಇದೆಲ್ಲವನ್ನೂ ತಾಯಿಗೆ ಹೇಳಿದಾಗ ಅವರು "ಇರ್ನೆ, ನೀನು ಸದ್ಯ ನಿನ್ನ ಗೆಳತಿಯಿಂದ ದೂರ ಇದ್ದುಬಿಡು. ಯಾಕೆಂದರೆ, ಇಂದಲ್ಲ ನಾಳೆ ಈ ವಿಷಯ ಅವರ ಮನೆಯಲ್ಲಿ ಗೊತ್ತಾಗಿ ಬಿಟ್ಟರೆ, ಅದಕ್ಕೆ ನೀನೇ ಹೊಣೆಗಾರಳಾಗುತ್ತೀ. ಅದಕ್ಕಾಗಿ ನೀನೇ ಅವಳೊಂದಿಗೆ ಒಂದಿಷ್ಟು ಅಂತರವನ್ನು ಕಾಯ್ದುಕೊಂಡು ಬಿಟ್ಟರೆ ಒಳ್ಳೆಯದಲ್ಲವೇ?" ಎಂದು ಉಪದೇಶ ಮಾಡಿದ್ದರು.

ಆದರೆ ಇರ್ನೆಗೆ ತಾಯಿಯ ಉಪದೇಶ ಹಿಡಿಸಿರಲಿಲ್ಲ. ಆದರೂ ಅವರ ಮಾತಿನಲ್ಲಿಯ ಸತ್ಯಾಂಶ ಮಾತ್ರ ಅವಳಿಗೆ ಅರ್ಥವಾಗಿತ್ತು. ಅದಾದ ನಂತರ ಅವಳು ಶರ್ಮಿಳಾಳನ್ನು ದೂರವಿಡತೊಡಗಿದಳು. ಅವಳು ತನ್ನ ಹತ್ತಿರ ಬರುವ ಸಂದರ್ಭಗಳಲ್ಲಿ ತಾನು ಮತ್ತೊಬ್ಬರ ಜೊತೆಗೆ ಮಾತಾಡುತ್ತಿರುವಂತೆ ನಟಿಸತೊಡಗಿದಳು. ಮುಖ್ಯವಾಗಿ ಮಧ್ಯಾಹ್ನದ ಊಟದ ಹೊತ್ತಿನಲ್ಲಿ ಅವಳು ಶರ್ಮಿಳಾಳನ್ನು ಸೂಕ್ಷ್ಮವಾಗಿ ಗಮನಿಸತೊಡಗಿದಳು. ಆದರೆ ಅವಳಿಂದ ಮರೆಯಾಗಿ ದೂರ ಇರುವುದು ಇರ್ನೆಗೆ ಸುಲಭದ ಮಾತಾಗಿರಲಿಲ್ಲ. ಏಕೆಂದರೆ, ಅವರು ತುಂಬಾ ಹತ್ತಿರದ ಸ್ನೇಹಿತೆಯರಾಗಿ ಒಬ್ಬರಿಗೊಬ್ಬರು ಹೊಂದಿಕೊಂಡಿದ್ದರು. ಈ ಬಗೆಯ ಗಾಢ